ಸಂದರ್ಶನ

# ಕುಟುಂಬದ ಸರ್ವರಿಗೂ ಸಮಪಾಲು...

◆ ಹಿಂದೆ ಹೆಣ್ಣು ಮಗಳಿಗೆ ತಾಯಿ ಮನೆಯಿಂದ 'ಸ್ತ್ರೀಧನ' ನೀಡುತ್ತಿದ್ದರು. ಈ ಬಗ್ಗೆ ಮಾಹಿತಿ ನೀಡಿ.

ಮದುವೆ ಸಮಯದಲ್ಲಿ ಹೆಣ್ಣಿಗೆ ಬರುತ್ತಿದ್ದ ಹಣವೇ 'ಸ್ತ್ರೀಧನ'. ಇದನ್ನು ಮದುವೆಯ ಮುನ್ನವೂ ಹೆಣ್ಣಿಗೆ ಕೊಡುತ್ತಿದ್ದರು. ಇದು ಬಳುವಳಿಯಾಗಿ ಅಥವಾ ಆಕೆಯ ಸ್ವಂತ ಸಂಪಾದನೆಯಿಂದ ಪಡೆದ ಆಸ್ತಿ. ಇದು ಆಕೆಯ ಸಂಪೂರ್ಣ ಹಕ್ಕು ಮತ್ತು ಆಕೆಯ ಒಪ್ಪಿಗೆ ಇಲ್ಲದೆ ಗಂಡನೂ ಸೇರಿದಂತೆ ಯಾರೂ ಇದನ್ನು ಬಳಸುವಂತಿಲ್ಲ. ಆದರೆ ಕಷ್ಟದ ಸಂದರ್ಭದಲ್ಲಿ ಈಕೆಯ ಒಪ್ಪಿಗೆ ಪಡೆದು ಬಳಸಬಹುದು. ಅಂತೆಯೇ ಈ ಆಸ್ತಿಯನ್ನು ಪತ್ನಿಗೆ ಹಿಂದಿರುಗಿಸುವ ನೈತಿಕ ಹೊಣೆ ಪತಿಗೆ ಇರಬೇಕು ಎಂಬುದನ್ನು ಸುಪ್ರೀಂ ಕೋರ್ಟ್ ಕೂಡ ಸ್ಪಷ್ಟಪಡಿಸಿದ್ದನ್ನು ಸ್ಮರಿಸಬಹುದು.

◆ ಪಿತ್ರಾರ್ಜಿತ ಆಸ್ತಿಯಲ್ಲಿ ಹೆಣ್ಣುಮಕ್ಕಳ ಪಾಲಿನ ಬಗ್ಗೆ ತಿಳಿಸಿ.

ಹೆಣ್ಣುಮಕ್ಕಳಿಗೂ ತಂದೆಯ ಆಸ್ತಿಯಲ್ಲಿ ಪಾಲು ಸಿಗಬೇಕು ಎಂಬುದಕ್ಕೆ ಕಾನೂನು ರೂಪಿಸಲಾಯಿತು. ಇದರಂತೆ 1956ರ ಹಿಂದೂ ಉತ್ತರಾಧಿಕಾರ ಕಾಯಿದೆಯು ಏಕರೂಪದ ಮತ್ತು ಸಮಗ್ರವಾದ ಉತ್ತರಾಧಿಕಾರ ವ್ಯವಸ್ಥೆಯನ್ನು ಒಂದೇ ಕಾಯಿದೆಯಾಗಿ ರೂಪಿಸಲಾಯಿತು. ಮಹಿಳೆ ಹೊಂದಿರುವ ಯಾವುದೇ ಆಸ್ತಿಯನ್ನು ಅವಳು ಸಂಪೂರ್ಣ ಆಸ್ತಿಯಾಗಿ ಮತ್ತು ಅವಳು ಬಯಸಿದಂತೆ ಅದನ್ನು ನಿಭಾಯಿಸಲು ಮತ್ತು ವಿಲೇವಾರಿ ಮಾಡಲು ಅವಳಿಗೆ ಸಂಪೂರ್ಣ ಅಧಿಕಾರ ನೀಡಲಾಯಿತು. ಈ ಕಾಯಿದೆಯ ಕೆಲವು ಭಾಗಗಳನ್ನು ಡಿಸೆಂಬರ್ 2004ರಲ್ಲಿ ಹಿಂದೂ ಉತ್ತರಾಧಿಕಾರ (ತಿದ್ದುಪಡಿ) ಕಾಯ್ದೆ, 2005ರ ಮೂಲಕ ತಿದ್ದುಪಡಿ ಮಾಡಲಾಯಿತು. 2005ರ ಹಿಂದೂ ಉತ್ತರಾಧಿಕಾರ ತಿದ್ದುಪಡಿ ಕಾಯ್ದೆಯ ಪ್ರಕಾರ ತಂದೆ ಮೃತಪಟ್ಟರೆ ಅವರ ಹೆಣ್ಣುಮಕ್ಕಳಿಗೆ ಗಂಡು ಮಕ್ಕಳೊಂದಿಗೆ ಸಮಾನ ಹಕ್ಕುಗಳನ್ನು ನೀಡಲಾಗಿದೆ.



ಹೇಮಲತಾ ಮಹಿಷಿ, ಹಿರಿಯ ನ್ಯಾಯವಾದಿ, ಬೆಂಗಳೂರು

◆ ಪಿತ್ರಾರ್ಜಿತ ಆಸ್ತಿ ಹಂಚಿಕೆಯು ಮದುವೆಯಾಗದ ಹೆಣ್ಣುಮಗಳಿಗೂ ಅನ್ವಯಿಸುವುದೇ?

ಹೌದು. ಮದುವೆಯಾಗದೇ ಇರುವ ಹೆಣ್ಣುಮಕ್ಕಳಿಗೂ ತಂದೆಯ ಆಸ್ತಿಯಲ್ಲಿ ಸಮಾನ ಭಾಗ ಸಿಗಬೇಕು ಎಂಬ ಕಾಯಿದೆ 1980ರಲ್ಲಿ ಬಂತು. ಭಾರತದಲ್ಲಿ, ಅವಿವಾಹಿತ ಹೆಣ್ಣುಮಕ್ಕಳು, ಗಂಡು ಮಕ್ಕಳು ಮತ್ತು ವಿವಾಹಿತ ಹೆಣ್ಣುಮಕ್ಕಳಂತೆ ತಮ್ಮ ತಂದೆಯ ಪೂರ್ವಜರ ಆಸ್ತಿಯಲ್ಲಿ ಸಮಾನ ಹಕ್ಕುಗಳನ್ನು ಹೊಂದಿದ್ದಾರೆ, ಪೂರ್ವಜರ ಮನೆಯಲ್ಲಿ ವಾಸಿಸುವ ಹಕ್ಕು, ವಿಭಜನೆಯ ಸಮಯದಲ್ಲಿ ಪಾಲು ಪಡೆಯುವ ಹಕ್ಕು ಕೂಡ ಆಕೆಗಿದೆ.



ಪರಿಸ್ಥಿತಿಯನ್ನು ಅವಲೋಕಿಸಿದಾಗ ಅವರಿಗೆ ಆಘಾತವೊಂದು ಕಾದಿರುತ್ತದೆ. ಅದೇನೆಂದರೆ ತಂದೆ ತಾಯಿಯರ ಮರಣಾನಂತರ ಕುಟುಂಬದ ಆಸ್ತಿಯನ್ನು ಮನೆಯಲ್ಲಿಯೇ ಇದ್ದ ಸಹೋದರ ಉಳಿದ ಸಹೋದರರ ಗಮನಕ್ಕೆ ತಾರದೆ ಅಥವಾ ಯಾವ ಸೂಚನೆಯನ್ನು ಕೊಡದೇ ತಮ್ಮ ಹೆಸರಿಗೆ ವರ್ಗಾಯಿಸಿಕೊಂಡಿರುತ್ತಾರೆ!

ಈ ಮೇಲಿನ ವಿದ್ಯಮಾನ ಸಾಮಾನ್ಯವಾಗಿ ಬಹುತೇಕ ಕೂಡು ಕುಟುಂಬಗಳಲ್ಲಿ ನಡೆಯುವಂಥದ್ದೇ ಆಗಿರುತ್ತದೆ.

ಇನ್ನೊಂದು ವಾಸ್ತವ ಘಟನೆಯನ್ನು ನೋಡೋಣ. ಇದೊಂದು ಕುಟುಂಬ. ತಂದೆ ತಾಯಿಗೆ ಇಬ್ಬರು ಗಂಡು ಮಕ್ಕಳು, ಒಬ್ಬಳು ಹೆಣ್ಣು ಮಗಳು. ಪ್ರೀತಿಯಿಂದ ಬೆಳೆಸಿದ ಮಗಳನ್ನು ಪೋಷಕರು ಮದುವೆ ಮಾಡಿ ಗಂಡನ ಮನೆಗೆ ಕಳಿಸಿಕೊಡುತ್ತಾರೆ. ಕಾಲಾನಂತರದಲ್ಲಿ ಪೋಷಕರು ತೀರಿಕೊಂಡ ನಂತರ ಯಾವುದೋ ಸಂದರ್ಭ ಅಥವಾ ಒತ್ತಡಕ್ಕೆ ಸಿಲುಕಿ ಆಕೆ ತಂದೆಯ ಆಸ್ತಿಯ ಬಗ್ಗೆ ಸಹೋದರರಲ್ಲಿ ವಿಚಾರಿಸಿದರೆ ಈಕೆಗೂ ಕೂಡ ಘನಘೋರ ಅನ್ಯಾಯವೇ ಆಗಿರುತ್ತದೆ. ಆಕೆಯ ಸಹೋದರರು ಅವಳ ಗಮನಕ್ಕೆ ತಾರದೆ ತಂದೆಯ ಆಸ್ತಿಯನ್ನು ತಮ್ಮಲ್ಲೇ ಹಂಚಿಕೊಂಡಿದ್ದಲ್ಲದೆ ಆಸ್ತಿಯ ಕೆಲ ಭಾಗವನ್ನು ಮಾರಾಟ ಮಾಡಿಯೂ ಇರುತ್ತಾರೆ!

ಇಂಥ ಸಂಗತಿಗಳು ಈಗ ಸರ್ವೇ